# ಆಹಾ ಸುದ್ದಿ!

★ ಸಸಿತೋಟ



ಇದು ಪ್ಯಾರಿಸ್‌ನ ‘ಫ್ಯೂರಿ ರೂಂ’. ಕೋಪ ಗೃಹದಲ್ಲಿ ಆಕ್ರೋಶವನ್ನು ತಣಿಸಿಕೊಳ್ಳುವ ಹೊಸ ಆಟವಿದು. ಕೊಠಡಿಯಲ್ಲಿಟ್ಟ ಪೀಠೋಪಕರಣ, ಬಾಟಲ್, ಕಂಪ್ಯೂಟರ್‌ಗಳನ್ನೆಲ್ಲ ಬಡಿದು ಪುಡಿಪುಡಿ ಮಾಡಿ ಸಿಟ್ಟು ಖಾಲಿ ಮಾಡಿಕೊಳ್ಳುವ ವಿಧಾನವಂತೆ. ಜೊತೆಗೆ ಕಿಸೆಯನ್ನೂ ಖಾಲಿ ಮಾಡಿಕೊಳ್ಳಬಹುದು.

ಅಸ್ಸಾಂನ ತೀನ್‌ಸುಖಿಯಾ ಪಟ್ಟಣದ ಎಟಿಎಂನಲ್ಲಿದ್ದ 29 ಲಕ್ಷ ಮೌಲ್ಯದ ನೋಟುಗಳಲ್ಲಿ 12 ಲಕ್ಷ ಮೌಲ್ಯದ ನೋಟುಗಳನ್ನು ಇಲಿ ಹರಿದು ತುಂಡು ತುಂಡು ಮಾಡಿದೆಯಂತೆ. ಇಲಿಯೂ ಅಲ್ಲೇ ಸತ್ತು ಬಿದ್ದಿತ್ತಂತೆ. ಅಪನಗದೀಕರಣ ಮಾಡಲು ಹೊರಟಿದ್ದ ಇಲಿಗೆ ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗಲಿಲ್ಲವೇನೋ!



ರಷ್ಯಾದಲ್ಲಿ ನಡೆಯುತ್ತಿರುವ ವಿಶ್ವಕಪ್ ಫುಟ್ಬಾಲ್ ಜ್ವರ ಹೇಗೆ ಹಬ್ಬುತ್ತಿದೆ ಎಂದರೆ ಜ್ಯೋತಿಷ, ಭವಿಷ್ಯ ಎಲ್ಲವನ್ನೂ ಅಭಿಮಾನಿಗಳು ಕಾಲ್ಚೆಂಡಿನಂತೆ ಒದ್ದುಕೊಂಡು ಅದರ ಹಿಂದೆ ಹೋಗುತ್ತಿದ್ದಾರೆ. ಬೆಕ್ಕು, ಗಿಳಿ, ಅಕ್ಟೋಪಸ್.. ಎಲ್ಲವೂ ಭವಿಷ್ಯ ಹೇಳಲು ಕವಡೆ– ಪಂಚಾಂಗ ಇಟ್ಟುಕೊಂಡು ಕೂತಿವೆ. ಕೊಲಂಬಿಯಾ ಮೃಗಾಲಯದ ಈ ಸಿಂಹಿಣಿ ವ್ಯಾಲೆಂಟಿನಾ ಕೂಡಾ ಪಂದ್ಯದ ಭವಿಷ್ಯ ಹೇಳಲು ಹೇಗೆ ಪರದಾಡುತ್ತಿದೆ ನೋಡಿ. ಗೆಲುವಿಗೆ ಯಾರ್‍ಯಾರು ಅಮಾವಾಸ್ಯೆ ಪೂಜೆ ಮಾಡಿಸಬೇಕೆಂದು ಈ ಸಿಂಹಿಣಿ ಸಲಹೆ ನೀಡಿದೆಯೋ!

ಜಗತ್ತಿನಲ್ಲಿ ಏನೆಲ್ಲ ಅದ್ಭುತಗಳು ನಡೆಯುತ್ತಿವೆ ನೋಡಿ. ಒಟ್ಟಿಗೇ ಊಟ, ಒಟ್ಟಿಗೇ ಆಟ, ಒಟ್ಟಿಗೇ ಸ್ನಾನ ಕೂಡ. ಅಮೆರಿಕದ ಡೋವರ್‌ನಲ್ಲಿ ನಡೆದ ಜನಪ್ರಿಯ ಫೈರ್‌ಫ್ಲೈ ಸಂಗೀತ ಉತ್ಸವದಲ್ಲಿ ಸಾವಿರಾರು ಮಂದಿ ಒಂದೇ ಸಲಕ್ಕೆ ಸ್ನಾನಕ್ಕೆ ಮೈಯೊಡ್ಡಿ ಗಿನ್ನೆಸ್ ವಿಶ್ವ ದಾಖಲೆ ಮಾಡಿಯೇ ಬಿಟ್ಟರಂತೆ. ಮತ್ತೆ... ಅವರವರ ಮನೆಯ ಸ್ನಾನಗೃಹದಲ್ಲಿ ಖಾಸಗಿಯಾಗಿ ಈ ಕೆಲಸ ಮುಗಿಸಿದರೆ ದಾಖಲೆಯಾಗುತ್ತದೆಯೇ?





ಈತ ಹರ್ಯಾಣದ ಮಹೇಂದ್ರಗಢದ ‘ಮಿ. ಹವಾಮಾನ ಇಲಾಖೆ’ ಸಂತ್ರಾಮ್. ಬೇಸಿಗೆಯ ಧಗೆಗೆ ಉಳಿದವರು ಅಂಗಿ ಬಿಚ್ಚಿ ಓಡಾಡಿದರೆ ಈತ ಶಾಲು ಸುತ್ತಿಕೊಂಡು ಮನೆಯೊಳಗೆ ಬೆಂಕಿ ಮುಂದೆ ಕೂರುತ್ತಾನಂತೆ. ಚಳಿಗಾಲದಲ್ಲಿ ಹತ್ತಿಯ ಸಡಿಲ ಉಡುಪು ಧರಿಸಿ ಐಸ್‌ಕ್ರೀಂ ತಿನ್ನುತ್ತ ಮಜ ಅನುಭವಿಸುತ್ತಾನಂತೆ. ಆದರೆ ‘ಎಂಡ್ ಆಫ್ ದಿ ಸೀಸನ್ ಸೇಲ್’ ಮಜಾ ಅನುಭವಿಸುವ ಹಾಗಿಲ್ಲವಲ್ಲ..!

ಭಾರಿ ದೇಹವುಳ್ಳವರ ಹಸಿವನ್ನು ಪರೀಕ್ಷಿಸಲು ಹಂಗರಿ ಸಂಶೋಧಕರು ದೇಹ ಬೆಳೆಸಿಕೊಂಡ ಶ್ವಾನಗಳ ಮೇಲೆ ಪ್ರಯೋಗ ಮಾಡಿದ್ದಾರಂತೆ. ಸಾಮಾನ್ಯ ತೂಕವಿರುವ ನಾಯಿಗಳು ಸಂಶೋಧಕರ ಸೂಚನೆಯನ್ನು ಪಾಲಿಸಿ ಕಡಿಮೆ ಆಹಾರದ ಪ್ಲೇಟಿನತ್ತ ತೆರಳಿದರೆ, ಬೊಜ್ಜು ಬೆಳೆಸಿಕೊಂಡ ನಾಯಿಗಳು ಮಾತನ್ನು ಕೇಳದೆ ಹೆಚ್ಚು ಆಹಾರವಿರುವ ಪ್ಲೇಟಿಗೆ ಬಾಯಿ ಹಾಕುತ್ತಿದ್ದವಂತೆ. ಗಂಡನ ಬೊಜ್ಜು ಕರಗಿಸಲು ಯತ್ನಿಸಲಿಲ್ಲವೇ ಎಂದು ಇನ್ನು ಮುಂದೆ ಪತ್ನಿಯನ್ನು ಬಯ್ಯುವ ಹಾಗಿಲ್ಲ!